ದಿನಾಂಕ 14-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ಬಿ.ಆರ್.ಪಿ ವಕೀಲರಿಂದಃ**

1. ನನ್ನ 1 ನೇ ಹೆಂಡತಿಯ ಹೆಸರು ಗೌರವ್ವ. ನಾವು ಎಷ್ಟನೇ ಇಸವಿಯಲ್ಲಿ ಮದುವೆ ಆಗಿರುತ್ತೇವೆ ಎಂದು ಗೊತ್ತಿಲ್ಲ. ನಮ್ಮ ಮದುವೆ ಯಾವ ಊರಿನಲ್ಲಿ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಅವರಿಗೆ 2 ಜನ ಮಕ್ಕಳು. 1 ನೇ ಮತ್ತು 2 ನೇ ವಾದಿಯರು ನನ್ನ ಮಕ್ಕಳು ಎಂದರೆ ಸರಿ. ನನ್ನ ಹಾಗೂ ನನ್ನ 1 ನೇ ಹೆಂಡತಿ ಗೌರವ್ವ ಅವರ ನಡುವೆ ಯಾವಾಗಾದರೂ ಜಗಳ ಆಗಿರುತ್ತದೆ ಎಂದರೆ ಹೌದು ಆಗಿರುತ್ತದೆ. ಈ ಬಗ್ಗೆ ಅವರು ನನ್ನ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿಕೊಂಡಿರುವುದಿಲ್ಲ. ಅವರು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಕ್ರಿ.ಮಿ 13/2002 ನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ನಾನು ಹಾಗೂ ನನ್ನ 1 ನೇ ಹೆಂಡತಿ ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ರಾಜಿಯಾದ ನಂತರ ಷರತ್ತಿನ ಪ್ರಕಾರ ಅವರನ್ನು ನಾನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗುವಷ್ಟರಲ್ಲಿ ಅವರು ತಮ್ಮ ತವರು ಮನೆಯಲ್ಲಿ ಮರಣ ಹೊಂದಿರುತ್ತಾರೆ. ಈ ರೀತಿ ಪ್ರಕರಣವನ್ನು ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಂಡಿದ್ದರಿಂದ ನಾನು ಸದರಿ ಪ್ರಕರಣದ ಧೃಡೀಕೃತ ನಕಲನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ಸುರೇಶ ಸಾತಪ್ಪ ಅರಳೇಶ್ವರ ನನ್ನ ಅಳಿಯ ಆಗಬೇಕು. ನನ್ನ ತಂಗಿ ಗಂಡ ಆಗಿರುತ್ತಾರೆ. ಅವರ ಹೆಂಡತಿ ಹೆಸರು ಶಾಂತವ್ವ ಸುರೇಶ ಅರಳೇಶ್ವರ ಆಗಿರುತ್ತದೆ. ಶಾಂತವ್ವ ಅವರು ನನ್ನ ಖಾಸಾ ತಂಗಿ ಆಗಬೇಕು. ಅದೇ ರೀತಿ ಸುರೇಶ ಸಾತಪ್ಪ ಅರಳೇಶ್ವರವರ ತಂಗಿಯಾದ ಗೌರವ್ವ ಅವರನ್ನು ನಾನು ಮದುವೆ ಆಗಿರುತ್ತೇನೆ ಎಂದರೆ ಸರಿ. ಸುರೇಶ ಅವರಿಗೆ ನನ್ನ ತಂಗಿಯನ್ನು ಮದುವೆಯಲ್ಲಿ ಕೊಟ್ಟು ಅವರ ತಂಗಿಯನ್ನು ನಾನು ಮದುವೆ ಆಗಿದ್ದರಿಂದ ನಾವು ಸಂಬಂಧದಲ್ಲಿ ಬೀಗರು ಆಗಿರುತ್ತೇವೆ.ವಾದಿಗಳು ಸುರೇಶ ಅವರ ತಂಗಿಯ ಮಕ್ಕಳು ಆಗಬೇಕು. ನನ್ನ ತಂಗಿ ಶಾಂತವ್ವ ಅವರು ಅವರ ಗಂಡ ಸುರೇಶ ಅವರ ವಿರುದ್ಧ ಯಾವುದೇ ಪೋಟಗಿ ಪ್ರಕರಣವನ್ನು ದಾಖಲಿಸಿಕೊಂಡಿರುವುದಿಲ್ಲ.

2. ನನ್ನ ತಂಗಿ ಶಾಂತವ್ವ ಅವರು ಇದೇ ನ್ಯಾಯಾಲಯದಲ್ಲಿ ಅವರ ಗಂಡ ಸುರೇಶ ಅವರ ವಿರುದ್ಧ ಕ್ರಿಮಿ 12/2004 ನ್ನು ಜೀವನಾಂಶವನ್ನು ಕೋರಿ ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣವು ನ್ಯಾಯಾಲಯದ ಹೊರಗೆ ರಾಜಿಯಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಗಳ ತಾಯಿ ಹಾಗೂ ನನ್ನ ತಂಗಿ ಸಲ್ಲಿಸಿರುವ ಜೀವನಾಂಶದ ಪ್ರಕರಣ ಇದೇ ನ್ಯಾಯಾಲಯದಲ್ಲಿ ರಾಜಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಧೃಡೀಕೃತ ನಕಲನ್ನು ಮಾನ್ಯ ನ್ ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರಕರಣವು ರಾಜಿಯಾಗಿರುತ್ತದೆ ಎಂದು ನನ್ನ ತಂಗಿ ಮಾನ್ಯ ನ್ಯಾಯಾಲಯದ ಮುಂದೆ ಒಂದು ಮೆಮೊವನ್ನು ರಾಜರು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ 1 ನೇ ಹೆಂಡತಿ ಗೌರವ್ವ ಅವರು ಯಾವ ಇಸವಿಯಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂಗಿ  ಗಂಡ ಸುರೇಶ ಹಾಗೂ ನಾನು ಅನ್ಯೋನ್ಯವಾಗಿದ್ದೇವೆ ಎಂದರೆ ಅವರ ಪೂರ್ತಿ ಅವರು ನಮ್ಮ ಪೂರ್ತಿ ನಾವು ಇದ್ದೇವೆ. ಸುಮಾರು 10 ವರ್ಷವರೆಗೂ ಮದುವೆ ಆದ ನಂತರ ನಾನು ಹಾಗೂ ಸುರೇಶ ಅನ್ಯೋನ್ಯವಾಗಿದ್ದೇವೆ. ನನ್ನ  ತಂಗಿ ಸುರೇಶ ಅವರನ್ನು ಮದುವೆ ಆಗಿದ್ದರಿಂದ ಇಲ್ಲಿಯವರೆಗೂ ಅವರ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವು ಅವರನ್ನು ಕರೆದುಕೊಂಡು ಬಂದಿರುತ್ತೇವೆ ಎನ್ನುತ್ತಾರೆ.  ಯಾವ ಕಾರಣಕ್ಕೆ ನಾವು ನಮ್ಮ ತಂಗಿ ಅವರನ್ನು ಅವರ ಗಂಡನ ಮನೆಯಿಂದ ಕರೆದುಕೊಂಡು ಬಂದಿರುತ್ತೇವೆ ಎಂದರೆ ನಾವು ಬ್ಯಾಡ ಎಂದು ಅವರನ್ನು ಕರೆದುಕೊಂಡು ಬಂದಿರುತ್ತೇವೆ. ನನ್ನ ತಂಗಿ ಹಾಗೂ  ಸುರೇಶ ಅವರ ವಿವಾಹ ವಿಚ್ಚೇದನ ಆಗಿರುವುದಿಲ್ಲ. ನನ್ನ ತಂಗಿಯಿಂದ ಸುರೇಶ ಅವರಿಗೆ ಯಾವುದೇ ಮಕ್ಕಳು ಆಗಿರುವುದಿಲ್ಲ. ಸುರೇಶ ಅವರು ನಮ್ಮ ವಿರುದ್ಧ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ. ಅಸಲು ದಾವಾ ನಂ. 148/2009 ನ್ನು ಅವರು ಏನಾದರೂ ದಾಖಲು ಮಾಡಿರುತ್ತಾರೆ ಎಂದರೆ ಇಲ್ಲಾ. ಸುರೇಶ ಆಗಲೀ ನನ್ನ ಹೆಂಡತಿ ಆಗಲೀ  ಜೀವನಾಂಶ ಕೋರಿ ನನ್ನ ವಿರುದ್ಧ  ಪ್ರಕರಣವನ್ನು ದಾಖಲಿಸಿರುವುದಿಲ್ಲ ಎಂದರೆ ಸರಿ. ಅಸಲು  ದಾವಾ ನಂ.148/2009 ರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾವೆಯು 2009 ರಲ್ಲಿ ರಾಜಿಯಾಗಿರುತ್ತಾರೆ ಎನ್ನುತ್ತಾರೆ.

3. ಅಸಲು ದಾವಾ ನಂ. 148/2009 ರಲ್ಲಿ ಯಾರು ಯಾರು ಪಕ್ಷಗಾರರು ಆಗಿರುತ್ತಾರೆ ಎಂದರೆ ನನ್ನ ಮೇಲೆ ಶ್ರೀಮತಿ ರೇಖಾ, ಮಂಜುಳಾ ಅವರು ಸಲ್ಲಿಸಿರುತ್ತಾರೆ. 1 ಮತ್ತು 2 ನೇ ವಾದಿಗಳನ್ನು ಹೊರತು  ಪಡಿಸಿ ಅಸಲು ದಾವಾ ನಂ.148/2009 ನ್ನು ಬೇರೆ ಯಾರು ನನ್ನ ವಿರುದ್ಧ

ದಾಖಲಿಸಿರುವುದಿಲ್ಲ. ಸದರಿ ದಾವೆಯನ್ನು ಆಸ್ತಿಗೆ ಸಂಬಂಧಿಸಿದಂತೆ ದಾಖಲಿಸಿಕೊಂಡಿರುತ್ತಾರೆ. ಸದರಿ ದಾವೆಯಲ್ಲಿ ಏನು ತೀರ್ಪು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಹಣವನ್ನು ಕೊಟ್ಟಿರುತ್ತೇವೆ. ಸದರಿ ಅಸಲು ದಾವಾ ನಂ.148/2009 ರಲ್ಲಿ ನಮ್ಮ ಎಲ್ಲಾ ಆಸ್ತಿಗಳ ಮೇಲೆ ದಾವೆಯನ್ನು ಸಲ್ಲಿಸಿರುತ್ತಾರೆ. ಸರ್ವೆ ನಂ.52/ಎ, 03 ಎಕರೆ 02 ಗುಂಟೆ ಯಾರ ಹೆಸರಿನಲ್ಲಿ ಇತ್ತು ಎಂದರೆ ನಮ್ಮ ತಂದೆಯವರ ಹೆಸರಿನಲ್ಲಿತ್ತು. ಅದೇ ರೀತಿ ಅದೇ ಹೊಸಳ್ಳಿ ಗ್ರಾಮದ ಸರ್ವೆ ನಂ.62/1 ರ ಪೈಕಿ 02 ಎಕರೆ 33 ಗುಂಟೆ ನನ್ನ ತಂದೆಯವರ ಹೆಸರಿನಲ್ಲಿ ಇರುತ್ತದೆ. ಅದೇ ಹೊಸಳ್ಳಿ ಗ್ರಾಮದ ಸರ್ವೆ ನಂ.25/1 ರ ಪೈಕಿ 11 ಗುಂಟೆ , ಸರ್ವೆ ನಂ. 50/2 ಇದರ ಪೈಕಿ 02 ಎಕರೆ 12 ಗುಂಟೆ, ಅದೇ ರೀತಿ ಅದೇ ಗ್ರಾಮದ ಸರ್ವೆ ನಂ. 46/1 ಬಿ ಪೈಕಿ 6 ಎಕರೆ 02 ಗುಂಟೆ ಅದರ ಪೈಕಿ 47 ಗುಂಟೆ ಮತ್ತು ಅದೇ ಹೊಸಳ್ಳಿ ಗ್ರಾಮದ ಹಿರೇಕಣಗಿ ಗ್ರಾಮ ಪಂಚಾಯತಿಯ ವಿಪಿಸಿ ನಂ. 74, ವಿಪಿಸಿ ನಂ. 76/1, ವಿಪಿಸಿ 77/1, ವಿಪಿಸಿ 78/1 ಗಳನ್ನು ಅಸಲು ದಾವಾ ನಂ. 148/2009 ರಲ್ಲಿ ನಮೂದಿಸಿರುತ್ತಾರೆ.

4. ಅಸಲು ದಾವಾ ನಂ. 148/2009 ರ ಧೃಡೀಕೃತ ನಕಲನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ನನಗೆ ಒಟ್ಟು 4 ಜನ ಹೆಣ್ಣು ಮಕ್ಕಳು ಹಾಗೂ 2 ಜನ ಗಂಡು ಮಕ್ಕಳು. ಅವರಲ್ಲಿ ಹೆಣ್ಣು ಮಕ್ಕಳು ದೊಡ್ಡವರಾಗಿರುತ್ತಾರೆ. ಅವರಿಗೆ ಅಂದಾಜು 30 ವರ್ಷ ವಯಸ್ಸು ಆಗಿರಬಹುದು. ಅವರ ಆದ ನಂತರ ಪ್ರಮೋದ ಹುಟ್ಟಿರುತ್ತಾರೆ. ಅವರಿಗೆ ಅಂದಾಜು 27 ವರ್ಷ ವಯಸ್ಸು. ರಂಗು ಅವರಿಗೆ 24 ವರ್ಷ ವಯಸ್ಸು. ರೇಣುಕಾ ಅವರಿಗೆ ಸಹ 24 ವರ್ಷ ವಯಸ್ಸು.

5. 1 ನೇ ಮಗಳಿನ ಹೆಸರು ಪ್ರೀಯಾ ವಯಾ-27 ವರ್ಷ, 2 ನೇ ಮಗನ ಹೆಸರು ಪ್ರಮೋದ ವಯಾ-25 ವರ್ಷ, ರಂಗು ಅವರ ವಯಸ್ಸು -25 ವರ್ಷ, ರಂಜಿತಾ ಅವರ ವಯಸ್ಸು 23 ವರ್ಷ, ರೇಖಾ ಹಾಗೂ ಮಂಜುಳಾ ಅವರು ಸದರಿ ಮಕ್ಕಳಿಗಿಂತಿ 2-3 ವರ್ಷ ದೊಡ್ಡವರು. ಪ್ರಮೋದ ಅವರ ತಾಯಿಯ ಹೆಸರು ಶಾರದಾ. ನನ್ನ ಹೆಂಡತಿ ಹೆಸರು ಗೌರವ್ವ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಹೆಸರು ಶಾರದಾ ಎಂದು ನುಡಿಯುತ್ತಾರೆ. ಶಾರದಾ ಅವರನ್ನು ಯಾವಾಗ ಮದುವೆ ಆಗಿರುತ್ತೇನೆ ಎಂದರೆ ಮದುವೆ ಆಗಿ ಸುಮಾರು 30 ವರ್ಷ ಆಗಿರುತ್ತದೆ. ಗೌರವ್ವ ಅವರು ಮರಣ ಹೊಂದಿ ಸುಮಾರು 40 ವರ್ಷ ಆಗಿರುತ್ತವೆ. ಗೌರವ್ವ ಅವರು ಮರಣ ಹೊಂದಿರುವ ಬಗ್ಗೆ ಯಾವ ಯಾವ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೀರಿ ಎಂದರೆ ಯಾವ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಗೌರವ್ವ ಅವರು 40 ವರ್ಷಗಳ ಹಿಂದೆ ಮರಣ ಹೊಂದಿರುವ ಬಗ್ಗೆ ಯಾವ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದರೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ನನಗೆ 1 ನೇ ಹೆಂಡತಿಯಿಂದ ಮಂಜುಳಾ ಮತ್ತು ರೇಖಾ ಅವರು ಜನಿಸಿರುತ್ತಾರೆ. 2 ನೇ ಹೆಂಡತಿಯಿಂದ ಪ್ರೀಯಾ, ಪ್ರಮೋದ, ರಂಗು ಮತ್ತು ರಂಜಿತಾ

ಅವರು ಜನಿಸಿರುತ್ತಾರೆ. ರೇಖಾ ಮತ್ತು ಮಂಜುಳಾ ( ಲಕ್ಷ್ಮೀ ) ನನ್ನ ಮಕ್ಕಳು ಎಂದರೆ ಸರಿ. ಅವರ ಮದುವೆ ಮುಂಜಿಯನ್ನು ನಾನೇ ಮಾಡಿರುತ್ತೇನೆ ಎಂದರೆ ಅವರ ಮಾವ ಅವರು ಮಾಡಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ